**ಓ.ಎಸ್ 315/2013**

**ಡಿ.ಡಬ್ಲೂ-3**

ದಿನಾಂಕಃ **27.11.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ಸಿ.ಎಸ್.ಎಸ್. ವಕೀಲರಿಂದಃ**

ನಾನು ಇದು ಎರಡನೇ ಬಾರಿ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬರುತ್ತಿದ್ದೇನೆ. ಈ ಹಿಂದೆ ಸುಮಾರು 20 ವರ್ಷಗಳ ಹಿಂದೆ ಬಂದಿರುತ್ತೇನೆ. ನಮ್ಮ ಜನಾಂಗದಲ್ಲಿ ನಾನು ಒಬ್ಬ ಮುಖ್ಯಸ್ಥ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸಾಕಷ್ಟು ಜನಗಳ ವ್ಯಾಜ್ಯ ವ್ಯವಹಾರಗಳಲ್ಲಿ ಕೂತು ತೀರ್ಮಾನ ಮಾಡಿರುತ್ತೇನೆಂದರೆ ಸರಿ. ಮೃತ ವಾದಿಯ ತಂದೆ ನನಗೆ ಗೊತ್ತು ಮುಂದುವರೆದು ನಮ್ಮ ಮನೆಯ ಪಕ್ಕದವರು. ಸದರಿಯವರು ಸುಮಾರು 80 ವರ್ಷ ಬದುಕಿದ್ದರು.

ಸದರಿಯವರು ವಿಲ್ ಬರೆದಿರುವ ಬಗ್ಗೆ ಸಾಕ್ಷಿ ಹೇಳಲು ಬಂದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆ ತೀರಿಹೋಗುವ ಕಾಲದಲ್ಲಿ ಆರೋಗ್ಯವಾಗಿ ಓಡಾಡಿಕೊಂಡು ಚೆನ್ನಾಗಿ ಇದ್ದರು ಎಂದರೆ ಸರಿ. ಸದರಿಯವರು ಮರಣ ಹೊಂದುವ ಕಾಲದಲ್ಲಿ ಆರೋಗ್ಯ ಸ್ಥಿತಿ ಸರಿ ಇರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.